

ಬುದ್ಧನ ಹಲ್ಲಿನ ದೇವಾಲಯ

ಈ ಹಲ್ಲಿನ ಪೆಟ್ಟಿಗೆಯ ಉತ್ಸವ ಮತ್ತು ಮೆರವಣಿಗೆಗಳೂ ನಡೆಯುತ್ತವೆ. ಬುದ್ಧನ ಹಲ್ಲಿನ ಪೆಟ್ಟಿಗೆ ಇಟ್ಟಿರುವ ಕೋಣೆಯ ಬಾಗಿಲನ್ನು ದಿನಕ್ಕೆ ಎರಡು ಬಾರಿ, ವಾದ್ಯ ಮೇಳಗಳ ನಡುವೆ ಸ್ವಲ್ಪಕಾಲ ತೆರೆಯುತ್ತಾರೆ. ಅದರ ದರ್ಶನ ಪಡೆದುಕೊಳ್ಳಲು ಸಾವಿರಾರು ಮಂದಿ ಬೆಳಿಗ್ಗೆ ಮತ್ತು ಸಂಜೆ ಸಾಲುಗಟ್ಟಿರುತ್ತಾರೆ. ಆದರೆ ಆ ಸಾಲಿನಲ್ಲೂ ಶಿಸ್ತು, ಸಂಯಮ ಮತ್ತು ಶಾಂತಿ ಕಾಣಬಹುದು. ಈ ದೇವಾಲಯದ ಪಕ್ಕದಲ್ಲಿ ವಿಶಾಲವಾದ ಮತ್ತು ಒಂದು ಸುಂದರವಾದ ಸರೋವರವಿದೆ. ಇದನ್ನು ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ ಶ್ರೀ ವಿಕ್ರಮ ರಾಜಸಿಂಘೆ ಎಂಬ ರಾಜನು ನಿರ್ಮಿಸಿದನು. ಇದರಲ್ಲಿ ಬೋಟಿಂಗ್ ವ್ಯವಸ್ಥೆ ಕೂಡ ಇದೆ.

ಪಿನ್ನಿವಾಲದ ಆನೆಗಳ ಶಿಬಿರ ಕ್ಯಾಂಡಿಯಿಂದ ಸುಮಾರು ಒಂದು ಗಂಟೆ ಪ್ರಯಾಣ ಮಾಡಿದರೆ ಸಿಗುತ್ತದೆ. ಇಲ್ಲಿ ಒಂದು ವಿಶಾಲವಾದ ಬಯಲಿನಲ್ಲಿ ಸುಮಾರು 70–80 ಆನೆಗಳನ್ನು ಒಂದು ಶಿಬಿರದಲ್ಲಿ ಸಾಕಲಾಗುತ್ತಿದೆ. ಈ ಆನೆಗಳಿಗೆ ಸಾಮೂಹಿಕವಾಗಿ ನದಿಯಲ್ಲಿ ಸ್ನಾನ ಮಾಡಿಸುವುದು ಮತ್ತು ಅವಕ್ಕೆ ಆಹಾರ ತಿನ್ನಿಸುವುದನ್ನು ವೀಕ್ಷಣೆ ಮಾಡುವುದು ಒಂದು ವಿನೂತನ ಅನುಭವ. ಹಣ ಕೊಟ್ಟು ಪ್ರವಾಸಿಗರು ಕೂಡ ಈ ಕಾರ್ಯದಲ್ಲಿ ಭಾಗವಹಿಸಬಹುದು. ಆನೆಗಳಿಗೆ ಮೈತೊಳೆಯುವುದು ಮತ್ತು ಅಲ್ಲೇ ದೊರಕುವ ಹಣ್ಣುಗಳನ್ನು ಕೊಂಡು ತಿನ್ನಿಸಬಹುದು.

ನಂತರ ನಾವು ಅಲ್ಲಿಂದ ಸ್ಪೈಸ್ ಗಾರ್ಡನ್ ಎನ್ನುವ ಇನ್ನೊಂದು ವನಧಾಮಕ್ಕೆ ಭೇಟಿಕೊಟ್ಟೆವು. ಇಲ್ಲಿ ಸ್ವಾಭಾವಿಕವಾಗಿ ಸಿಗುವ ಕೆಲವು ಗಿಡ ಮರಗಳಿಂದ ಅನೇಕ ಔಷಧಗಳನ್ನು ತಯಾರಿಸಿ ಅವುಗಳನ್ನು ವಿವಿಧ ಕಾಯಿಲೆಗಳನ್ನು ವಾಸಿಮಾಡಲು ಬಳಸುತ್ತಾರೆ. ತಲೆನೋವು, ಮಂಡಿನೋವು, ವಾತಪಿತ್ತ, ಕೂದಲು ಉದುರುವಿಕೆ, ಲೈಂಗಿಕ ದೌರ್ಬಲ್ಯ ಮುಂತಾದ ಕಾಯಿಲೆಗಳಿಗೆ ಸಸ್ಯಗಳಿಂದ ಇಲ್ಲೇ ತಯಾರು ಮಾಡಿದ ಔಷಧಿಗಳನ್ನು ಮಾರಾಟಕ್ಕಿಟ್ಟಿದ್ದಾರೆ. ಈ ಗಾರ್ಡನ್‌ನಲ್ಲಿ ಒಮ್ಮೆ ಸುತ್ತಾಡಿಸಿ, ಇಲ್ಲಿನ ಎಲ್ಲಾ ಮರಗಳ ಪರಿಚಯವನ್ನು ಮತ್ತು ಅವುಗಳಿಂದ ಆಗುವ ಉಪಯೋಗಗಳನ್ನು ತಿಳಿಸಿದ ನಂತರ ಕೊನೆಗೆ ಈ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧೀಯ ಗುಣಗಳುಳ್ಳ ಎಣ್ಣೆಗಳನ್ನು ಇಷ್ಟವಾದವರು ಕೊಂಡುಕೊಳ್ಳಬಹುದು.

ಈ ದೇಶದ ಮುಖ್ಯ ಆದಾಯ ಪ್ರವಾಸೋದ್ಯಮ ಎಂದು ನಮ್ಮ ಗೈಡ್ ತಿಳಿಸಿದ. ಇಂತಹ ಪುಟ್ಟ ರಾಷ್ಟ್ರದಲ್ಲಿ ಪ್ರವಾಸೋದ್ಯಮ ಹೇಗೆ ಭಾರತಕ್ಕಿಂತಲೂ ಇಷ್ಟು ಚೆನ್ನಾಗಿ ಅಭಿವೃದ್ಧಿ ಹೊಂದಿದೆ ಎಂದು ಯೋಚಿಸಿದರೆ ಆಶ್ಚರ್ಯವಾಗುತ್ತದೆ. ಇಲ್ಲಿನ ಜನಗಳು ತಮ್ಮ ದೇಶವನ್ನು ಬಹಳ ಪ್ರೀತಿಸುತ್ತಾರೆ. ಹಿಂದೊಮ್ಮೆ ಎಲ್‌ಟಿಟಿಇ ಸಂಘಟನೆಯ ಜೊತೆ ನಡೆದ ಯುದ್ಧಗಳಿಂದ ಇಡೀ ದೇಶವೇ ನಲುಗಿ, ಆರ್ಥಿಕವಾಗಿ ತತ್ತರಿಸಿದರು ಕೂಡ, ಈಗ ಸುಧಾರಿಸಿಕೊಂಡು ಮತ್ತೆ ಅಭಿವೃದ್ಧಿಯ ಪಥಕ್ಕೆ ಬರಲು ಈ ದೇಶ ಶ್ರಮಿಸುತ್ತಿದೆ. ರಾಜಕೀಯ ನಾಯಕರ ಭ್ರಷ್ಟಾಚಾರಗಳಿಂದ ರೋಸಿಹೋಗಿ ಇತ್ತೀಚಿಗೆ ಇಲ್ಲಿನ ಯುವಜನತೆ ದಂಗೆಯೆದ್ದಿದ್ದು ಮಾತ್ರವಲ್ಲ ಆಂತರಿಕ ಕಲಹ ಮತ್ತು ಕ್ಷಿಪ್ರ ಕ್ರಾಂತಿಗಳಿಂದಾಗಿ ಅನೇಕ ಬಾರಿ ರಾಜಕೀಯ ಅರಾಜಕತೆ ಉಂಟಾಗಿ ಇಲ್ಲಿನ ಆರ್ಥಿಕತೆ ಪಾತಾಳಕ್ಕೆ ಕುಸಿದಿದ್ದರು ಸಹ ಇಲ್ಲಿಯ ಜನರು ಸಿನಿಕರಾಗದೆ ಒಳ್ಳೆಯ ದಿನಗಳು ಮುಂದೆ ಬರುತ್ತವೆ ಎಂಬ ಆಶಾಭಾವನೆ ಇರಿಸಿಕೊಂಡಿದ್ದಾರೆ.

ಪ್ರವಾಸಿಗರ ಎದುರಿನಲ್ಲಿ ತಮ್ಮ ದೇಶದ ಬಗ್ಗೆ ಬಹಳ ಹೆಮ್ಮೆಯಿಂದ ಮಾತನಾಡುತ್ತಾರೆ. ಪ್ರವಾಸಿಗರೊಂದಿಗೆ ನಗುಮುಖದಿಂದ, ಬಹಳ ಪ್ರೀತಿಯಿಂದ ವ್ಯವಹರಿಸುತ್ತಾರೆ. ಪ್ರವಾಸಿಗರನ್ನು ಯಾರೂ ಸುಲಿಯಲು ನೋಡುವುದಿಲ್ಲ ಮತ್ತು ತಮ್ಮ ನಾಡನ್ನು ನೀಟಾಗಿ ಇಟ್ಟುಕೊಂಡಿದ್ದಾರೆ. ಇಲ್ಲಿ ಪ್ರವಾಸೋದ್ಯಮ ಇಷ್ಟೊಂದು ಬೆಳೆಯಲು ಇದೆಲ್ಲವೂ ಕಾರಣವಾಗಿರಬಹುದು.

ಜನ ಸಣ್ಣಪುಟ್ಟ ಸಂತೋಷ, ಜೀವನ ಪ್ರೀತಿಯನ್ನು ಪೂರ್ತಿಯಾಗಿ ಕಳೆದುಕೊಂಡಿಲ್ಲ. ಅಂದು ನಾವು ಬುದ್ಧನ ದರ್ಶನಕ್ಕೆ ಸಂಜೆ ಹೋದಾಗ, ಬುದ್ಧನ ಸನ್ನಿಧಿಯಲ್ಲಿ ಶ್ವೇತ ವಸ್ತ್ರಧಾರಿಗಳಾದ ಸಾವಿರಾರು ಜನ ಸಾಲಾಗಿ, ನಿಶ್ಶಬ್ದವಾಗಿ ಇಳಿ ಸಂಜೆಯ ಕತ್ತಲಿನಲ್ಲಿ, ಪ್ರತಿಯೊಬ್ಬರೂ ಕೈಯಲ್ಲಿ ಮೇಣದ ಬತ್ತಿ ಹಿಡಿದು ನಿಧಾನವಾಗಿ ಸಾಗುವ ದೃಶ್ಯ ಕಣ್ಣಿಗೆ ಬಿತ್ತು. ಅವರ ಮುಖದ ಮೇಲೆ ಬೀಳುತ್ತಿದ್ದ ಮೇಣದಬತ್ತಿಯ ಮಂದಬೆಳಕು ಬುದ್ಧನ ತತ್ವಗಳ ಪ್ರತಿಫಲನದ ದಿವ್ಯಪ್ರಭೆಯಂತೆ ತೋರುತ್ತಿತ್ತು.



ಬೊಟಾನಿಕಲ್ ಗಾರ್ಡನ್